ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಪ್ರವೇಶಾತಿ ವಿಭಾಗ

ಅಂತರ್ಜಾಲ: www.ksoumysuru.ac.in ಇ-ಮೇಲ್ – admksou@gmail.com

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 168 /2026-27/01 ದಿನಾಂಕ: 11.08.2026

ಸುತ್ತೋಲೆ:

**ವಿಷಯ : 2026-27ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ಕುರಿತಂತೆ:**

ಉಲ್ಲೇಖ:1.UGC-DEB ನ ಇ-ಮೇಲ್ ಸಂದೇಶ ದಿನಾಂಕ: 02.07.2026

2.ಡೀನ್ (ಶೈ), ಕರಾಮುವಿ ಇವರ ಟಿಪ್ಪಣಿ ಸಂಖ್ಯೆ: ಕರಾಮುವಿ/ಡೀನ್(ಶೈ)/04/ 26-27, ದಿನಾಂಕ03.07.2026

3.ವಿವಿ ಪ್ರವೇಶಾತಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/ 168 / 2026-27, ದಿನಾಂಕ: 10.07.2026

4.UGC Public Notice No: F.No; 4-1/2025(DEB/R-4) ದಿನಾಂಕ:05.08.26

5.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 11.08.2026

******

2026-27ರ ಜುಲೈ ಆವೃತ್ತಿಯಲ್ಲಿ ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮದ ಪ್ರವೇಶಾತಿಗೆ ಉಲ್ಲೇಖ(3)ರಂತೆ ಪರಿಷ್ಕೃತ ಪ್ರವೇಶಾತಿ ಅಧಿಸೂಚನೆಯನ್ವಯ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿ, ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿ.ಇ.ಟಿ)ಗೆ ಅರ್ಜಿ ಸಲ್ಲಿಸಲು ದಿನಾಂಕ:10.08.2026 ಅಂತಿಮ ದಿನಾಂಕವಾಗಿಯೂ, ಹಾಗೂ ದಿನಾಂಕ: 16.08.2026 (ಭಾನುವಾರ)ರಂದು ಸಿ.ಇ.ಟಿ. ಪರೀಕ್ಷೆ ನಿಗದಿಪಡಿಸಲಾಗಿದ್ದಿತು.

ಯುಜಿಸಿಯು ಉಲ್ಲೇಖ(4)ರಲ್ಲಿ 2026-27ರ ಜುಲೈ ಆವೃತ್ತಿಯ ಪ್ರವೇಶಾತಿ ದಿನಾಂಕವನ್ನು ಅಭ್ಯರ್ಥಿಗಳ ಅನುಕೂಲಕ್ಕಾಗಿ ವಿಸ್ತರಿಸಿರುವುದರಿಂದ **ಬಿ.ಇಡಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಲಾಗಿದ್ದ ದಿನಾಂಕವನ್ನು ದಿನಾಂಕ: 22.08.2026 ರವರೆಗೆ ವಿಸ್ತರಿಸಲಾಗಿದೆ. ಹಾಗೆಯೇ, ಸಿ.ಇ.ಟಿ ಪರೀಕ್ಷೆಗೆ ಈಗಾಗಲೇ ನಿಗದಿಯಾಗಿದ್ದ ದಿನಾಂಕವನ್ನು ಪರಿಷ್ಕರಿಸಿ ದಿನಾಂಕ:30.08.2026 ಕ್ಕೆ ಮರು ನಿಗದಿಪಡಿಸಲಾಗಿದೆ. ಪರಿಷ್ಕೃತ ದಿನಾಂಕದಲ್ಲಿ ಸಿ.ಇ.ಟಿ ಪರೀಕ್ಷೆಯನ್ನು ಸೂಚಿತ ಸ್ಥಳಗಳಲ್ಲಿ ನಡೆಸಲಾಗುವುದು.**

ಅಭ್ಯರ್ಥಿಗಳು ಈ ಬದಲಾವಣೆಯನ್ನು ಗಮನಿಸಿ ಅದರಂತೆ ಕ್ರಮವಹಿಸುವುದು. ಸಿ.ಇ.ಟಿ ಪರೀಕ್ಷೆಗೆ ಹೊಸದಾಗಿ ಅರ್ಜಿ ಸಲ್ಲಿಸಬಯಸುವ ಅರ್ಹ ಅಭ್ಯರ್ಥಿಗಳು ಇದನ್ನು ಸದುಪಯೋಗಪಡಿಸಿಕೊಂಡು ಪರಿಷ್ಕೃತ ದಿನಾಂಕದೊಳಗೆ ವಿವಿಯ ಅಡ್ಮಿಷನ್ ಪೋರ್ಟಲ್‌ನಲ್ಲಿ https://ksouportal.com/views/StudentHome.aspx ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.

1. **ಬಿ.ಇಡಿ. ಸಿ.ಇ.ಟಿ. ಪರೀಕ್ಷೆಗೆ ಅರ್ಜಿ ಸಲ್ಲಿಸಲು ಪರಿಷ್ಕೃತ ಅಂತಿಮ ದಿನಾಂಕ: 22.08.2026**
2. **ಬಿ.ಇಡಿ. ಸಿ.ಇ.ಟಿ ಪರೀಕ್ಷೆಯ ಪರಿಷ್ಕೃತ ದಿನಾಂಕ: 30.08.2026**

ಕುಲಸಚಿವ

ಗೆ:

2026-27ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸಿರುವ / ಸಲ್ಲಿಸುವ ಅಭ್ಯರ್ಥಿಗಳ ಗಮನಕ್ಕೆ – ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ;



Scanned with OKEN Scanner

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.- ಇವರಿಗೆ LSC ಗಳ ಗಮನಕ್ಕೆ ತರುವುದು
3. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
4. ಪ್ರಾದೇಶಿಕ ನಿರ್ದೇಶಕರು, ವಿವಿ ಪ್ರಾದೇಶಿಕ ಕೇಂದ್ರಗಳು- ನಿಮ್ಮ ಪ್ರಾದೇಶಿಕ ಕೇಂದ್ರದ ವ್ಯಾಪ್ತಿಯಲ್ಲಿ ಕೂಡಲೇ ಕ್ರಮವಹಿಸಿ ದೈನಂದಿನ ಪತ್ರಿಕೆಗಳಲ್ಲಿ ಸುದ್ದಿ ಮಾಧ್ಯಮದಡಿ ಉಚಿತವಾಗಿ ಪ್ರಕಟಿಸಲು ಸೂಚಿಸಿದೆ.
5. ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು
6. ಮೇಲ್ವಿಚಾರಕರು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ, ಮೈಸೂರು – ಈ ಸುತ್ತೋಲೆಯನ್ನು ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸಿರುವ ಹಾಗೂ ಸಲ್ಲಿಸುವ ಅಭ್ಯರ್ಥಿಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿವಿಯ ಅಂತರ್ಜಾಲದಲ್ಲಿ ಕೂಡಲೇ ಪ್ರಕಟಿಸಲು ತಿಳಿಸಿದೆ.
7. ಮೇಲ್ವಿಚಾರಕರು, ಇನ್‌ಹಾಕ್ ಐಟಿ ಸಲ್ಯೂಷನ್ಸ್, ಬೆಂಗಳೂರು - ಇವರಿಗೆ ಈಗಾಗಲೇ ಸಿ.ಇ.ಟಿ.ಗೆ ಅರ್ಜಿ ಸಲ್ಲಿಸಿರುವ ಪ್ರತೀ ಅಭ್ಯರ್ಥಿಗಳಿಗೆ ಸಂದೇಶವನ್ನು SMS ಹಾಗೂ whatsapp ಮೂಲಕವೂ ಕೂಡಲೇ ಕಳುಹಿಸಲು ತಿಳಿಸಿದೆ.
8. 2026ರ ಬಿ.ಇಡಿ ಶಿಕ್ಷಣಕ್ರಮದ ಸೀಟುಗಳ ಆಯ್ಕೆ ಸಮಿತಿಯ ಗಮನಕ್ಕೆ.
9. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
10. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
11. ಕಚೇರಿ ಪ್ರತಿ



Scanned with OKEN Scanner